**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12**

ಸಂಖ್ಯೆ: ಪಪೂಶಿಇ/ಶೈಸಾ/ಕಾ.ಕಾರ್ಯ.ನಿ./2020-21 ದಿನಾಂಕ: 14 .12.2020

**ಸುತ್ತೋಲೆ**

ವಿಷಯ: ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ಸಿಬ್ಬಂದಿ ವರ್ಗದವರು ಕಾರ್ಯನಿರತ ದಿನಗಳಲ್ಲಿನ ಕಾಲೇಜು ಅವಧಿಯಲ್ಲಿ ಕಡ್ಡಾಯವಾಗಿ ಕಾಲೇಜುಗಳಲ್ಲಿ ಕಾರ್ಯ ನಿರ್ವಹಿಸುವ ಕುರಿತು.

ಉಲ್ಲೇಖ: ಪಪೂಶಿಇ/ಶೈಸಾ/ದಾವೇಶೈಚ/19-20 ದಿ: 12-08-2020

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯದ ಪದವಿ ಪೂರ್ವ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಉಪನ್ಯಾಸಕರು, ಕಾರ್ಯನಿರತ ದಿನಗಳ (ರಜಾ ದಿನಗಳನ್ನು ಹೊರತುಪಡಿಸಿ) ಅವಧಿಯಲ್ಲಿ ಬೆಳಗ್ಗೆ 10:00 ರಿಂದ ಮಧ್ಯಾಹ್ನ 4:00 ಗಂಟೆಯವರೆಗೆ ಕಡ್ಡಾಯವಾಗಿ ಕಾಲೇಜುಗಳಲ್ಲಿ ಹಾಜರಿದ್ದು, ಪ್ರಿ-ರೆಕಾರ್ಡೆಡ್ ಯೂಟ್ಯೂಬ್ ತರಗತಿಗಳನ್ನು ಇನ್ನೂ ಪರಿಣಾಮಕಾರಿಯಾಗಿ ಬಳಸಿ ವಿದ್ಯಾರ್ಥಿಗಳನ್ನು ಕಲಿಕಾ ಪ್ರಕ್ರಿಯೆಯಲ್ಲಿ ತೊಡಗುವಂತೆ ಪ್ರೇರಿಪಿಸುವ ಸಂಪೂರ್ಣ ಜವಾಬ್ದಾರಿ ಉಪನ್ಯಾಸಕರದ್ದಾಗಿರುತ್ತದೆ.

ಉಲ್ಲೇಖಿತ ಸುತ್ತೋಲೆಯಲ್ಲಿ ತಿಳಿಸಿರುವಂತೆ ಆಯಾ ವಿಷಯವಾರು ಉಪನ್ಯಾಸಕರುಗಳು ವಾಟ್ಸಾಪ್ ಗುಂಪುಗಳನ್ನು ಮಾಡಿ ವಿದ್ಯಾರ್ಥಿಗಳಲ್ಲಿ ಪಾಠಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ ಉತ್ತರಿಸುವುದು, ವಾಟ್ಸಪ್‌ಗಳ ಮೂಲಕ ಗೃಹ ಕಾರ್ಯ (Home Work) ನೀಡುವುದು, ಕಿರು ಪರೀಕ್ಷೆಗಳನ್ನು ನಡೆಸುವುದು ಈ ರೀತಿಯಲ್ಲಿ ಕಲಿಕಾ ಪೂರಕ ಚಟುವಟಿಕೆಗಳನ್ನು ನಡೆಸುವುದು. ಇದರ ಮೇಲ್ವಿಚಾರಣೆಯನ್ನು ಸದರಿ ಕಾಲೇಜಿನ ಪ್ರಾಂಶುಪಾಲರು ನಿರ್ವಹಿಸುವುದು. ಈ ಬಗ್ಗೆ ಜಿಲ್ಲಾ ಉಪನಿರ್ದೇಶಕರು ದಿನಕ್ಕೆ ಕನಿಷ್ಠ 2 ಕಾಲೇಜುಗಳಿಗೆ ಭೇಟಿ ನೀಡಿ, ಈ ಬಗ್ಗೆ ಗಮನಹರಿಸಿ/ಪರಿಶೀಲಿಸಿ ಸಂಕ್ಷಿಪ್ತ ವರದಿಯನ್ನು ಕೇಂದ್ರ ಕಛೇರಿಗೆ ಕಳುಹಿಸುವುದು. ಉಪನ್ಯಾಸಕರ ಹಾಗೂ ಸಿಬ್ಬಂದಿಯವರ ಗೈರು ಹಾಜರಿಯನ್ನು ಅವರ ಹಕ್ಕಿನಲ್ಲಿರುವ ಸಾಂದರ್ಭಿಕ ರಜೆ (CL)ಅಥವಾ ಗಳಿಕೆ ರಜೆ (EL) ಎಂದು ನಮೂದಿಸುವುದು.

ಮುಂದುವರೆದು ಪ್ರತಿ ಉಪನ್ಯಾಸಕರು ತಮ್ಮ ವಿಷಯಕ್ಕೆ ಸಂಬಂಧಿಸಿದ Assignment ಗಳನ್ನು (ಪ್ರತಿ ಪಾಠಕ್ಕೆ ಕನಿಷ್ಠ 2 ರಂತೆ) ವಿದ್ಯಾರ್ಥಿಗಳಿಗೆ ನೀಡಿ ವಿದ್ಯಾರ್ಥಿಗಳು ಅವುಗಳಿಗೆ ಉತ್ತರಿಸಿ PDF ಅಥವಾ Photo ತೆಗೆದು ಕಳಿಸಿದ ನಂತರ ಉಪನ್ಯಾಸಕರು ಪರಿಶೀಲಿಸಿ ದಾಖಲಿಸುವುದು ಕಡ್ಡಾಯವಾಗಿರುತ್ತದೆ ಹಾಗೂ ಸದರಿ

Scanned with CamScanner

ಮಾಹಿತಿಯನ್ನು ಪ್ರಾಂಶುಪಾಲರಿಗೆ ವರದಿ ಮಾಡುವುದು. ಈ ಮಾಹಿತಿಗಳನ್ನು ಜಿಲ್ಲಾ ಉಪನಿರ್ದೇಶಕರು ಪಡೆದು ಜಿಲ್ಲೆಯ ಕ್ರೂಢೀಕೃತ ವರದಿಯನ್ನು ಸಿದ್ಧಪಡಿಸಿ ಒಂದು ಪ್ರತಿಯನ್ನು ಕೇಂದ್ರ ಕಛೇರಿಗೆ ಸಲ್ಲಿಸುವುದು.

ಪ್ರಸ್ತುತ ಲಭ್ಯವಿರುವ ಪ್ರಥಮ ಮತ್ತು ದ್ವಿತೀಯ ಪಿಯುಸಿಯ ವಿಡಿಯೋ ತರಗತಿಗಳ ಲಿಂಕ್‌ಗಳನ್ನು ಇಲಾಖೆಯ ಅಧಿಕೃತ ಜಾಲತಾಣ www.pue.kar.nic.in ದಲ್ಲಿ ಅಳವಡಿಸಿದ್ದು ವಿದ್ಯಾರ್ಥಿಗಳು ಮತ್ತು ಉಪನ್ಯಾಸಕರು ಸದಾ ಕಾಲ ಬಳಕೆ ಮಾಡಿಕೊಳ್ಳಬಹುದಾಗಿರುತ್ತದೆ. ಈ ಮಾಹಿತಿಯನ್ನು ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರಿಗೆ ನೀಡಿ ಉಪನ್ಯಾಸಕರ ಮೂಲಕ ವಿದ್ಯಾರ್ಥಿಗಳ ಗಮನಕ್ಕೆ ತರುವುದು.

ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ. ಈ ಬಗ್ಗೆ ಯಾವುದೇ ಕಾಲೇಜುಗಳ ಕುರಿತು ದೂರುಗಳು ಬಂದಲ್ಲಿ ಜಿಲ್ಲಾ ಉಪನಿರ್ದೇಶಕರು ಹಾಗೂ ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರನ್ನು ನೇರ ಹೊಣೆಗಾರರನ್ನಾಗಿಸಲಾಗುವುದು.

Snehal

ನಿರ್ದೇಶಕರು

ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳು:

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರುಗಳಿಗೆ ಸೂಕ್ತ ಕ್ರಮಕ್ಕಾಗಿ .
2. ಇ-ಆಡಳಿತ ಶಾಖೆ – ಇಲಾಖೆಯ ಅಂತರ್ಜಾಲದಲ್ಲಿ ಅಳವಡಿಸಲು
3. ಹೆಚ್ಚುವರಿ / ಕಛೇರಿ ಪ್ರತಿ.

Scanned with CamScanner